ರಸ್ತೆಯಲ್ಲಿ ವೇಗ ನಿಯಂತ್ರಣದ ಉಬ್ಬುರಗಳು ಇರುವಲ್ಲಿ ಎಚ್ಚರಿಕೆಯ ಫಲಕಗಳನ್ನು ಹಾಕುವ ಬಗ್ಗೆ

೫೧೫. ಶ್ರೀ ಪಟಮಕ್ಕಿ ರತ್ನಾಕರ (ತೀರ್ಥಹಳ್ಳಿ).—ಮಾನ್ಯ ಲೋಕೋಪಯೋಗಿ, ಜಲಾನಯನ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ರಸ್ತೆಯಲ್ಲಿ ವೇಗ ನಿಯಂತ್ರಣದ ಉಬ್ಬುರಗಳು ಇರುವಲ್ಲಿ ಎಚ್ಚರಿಕೆಯ ಫಲಕಗಳನ್ನು ಹಲವು ಕಡೆ ಹಾಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ರಾತ್ರಿಯಲ್ಲಿ ಪ್ರಯಾಣಿಕರು ಉಬ್ಬುರಗಳನ್ನು ಗುರುತಿಸಲು ಅನುಕೂಲವಾಗುವಂತೆ ಉಬ್ಬುರಗಳಿಗೆ ರೇಡಿಯಂ ಪೆಯಿಂಟ್ ಹಚ್ಚುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ; ಅಂತಹ ಸ್ಥಳಗಳಲ್ಲಿ ಎಚ್ಚರಿಕೆಯ ಫಲಕಗಳನ್ನು ಹಾಕುವಂತೆ ಸೂಚನೆ ಕೊಡಲಾಗಿದೆ.

ಆ) ಇಲ್ಲ. ಆದರೆ ರಸ್ತೆ ಉಬ್ಬುರಗಳಿಗೆ ಬಣ್ಣ ಹಚ್ಚದೆ ಇರುವ ಕಡೆಯಲ್ಲಿ ಬಿಳಿ ಬಣ್ಣದ ಪಟ್ಟಿಗಳನ್ನು ಕೇಂದ್ರ ಸರ್ಕಾರದ ಸಲಹೆಯಂತೆ ಹಚ್ಚಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಈ ಉಬ್ಬುಗಳ ಮತ್ತು ಇವುಗಳಿಗೆ ಬಣ್ಣ ಹಚ್ಚುವ ನಿಯಮಗಳನ್ನು ಕೇಂದ್ರ ಸರ್ಕಾರದವರು ಪುನಃ ಪರಿಶೀಲಿಸುತ್ತಿರುವರೆಂದು ತಿಳಿದು ಬಂದಿದೆ.

ಆಂಗನವಾಡಿ ಕೇಂದ್ರಗಳನ್ನು ಗುಬ್ಬಿ ಕ್ಷೇತ್ರದಲ್ಲಿ ತೆರೆಯುವ ವಿಚಾರ.

೫೫೪. ಶ್ರೀ ಜಿ.ಎಸ್. ಶಿವಸಂಜಪ್ಪ (ಗುಬ್ಬಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿ ಆಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿರುವ ಸ್ಥಳಗಳಾವುವು ಹಾಗೂ ಈ ಕೇಂದ್ರಗಳಿಗೆ ಕಟ್ಟಡಗಳನ್ನು ನಿರ್ಮಿಸಲಾಗಿದೆಯೇ? ಅಥವಾ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಆಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿರುವ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಕೇಂದ್ರ ಸರ್ಕಾರದ ನೀತಿಗನುಗುಣವಾಗಿ ಸಾಮಾನ್ಯವಾಗಿ ದೊರೆಯಬಹುದಾದ ಸಾರ್ವಜನಿಕ ಕಟ್ಟಡಗಳಾದ ಪಂಚಾಯಿತಿ ಕಟ್ಟಡಗಳು, ಶಾಲಾ ಕಟ್ಟಡಗಳು, ಸಮುದಾಯ ಕಟ್ಟಡಗಳು, ಪ್ರಾರಕಟ್ಟಡಗಳು, ಇವುಗಳಲ್ಲಿ ಆಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತವೆ. ಗ್ರಾಮದಲ್ಲಿ ಗ್ರಾಮಂದನವರು ಬಾಡಿಗೆ ರಹಿತ ಕಟ್ಟಡಗಳನ್ನು ವ್ಯವಸ್ಥೆ ಮಾಡಿಕೊಂಡಿರಬಹುದು. ನಗರ ಪ್ರದೇಶದಲ್ಲಿ ತಿಂಗಳಿಗೆ ೧೫೦ ರೂಪಾಯಿವರೆಗೆ ಬಾಡಿಗೆಯನ್ನು ಕೊಡಲಾಗುತ್ತಿದೆ.

ಕಟ್ಟಡಗಳ ಕೊರತೆ ಇರುವ ಕಡೆ ಎನ್.ಆರ್.ಇ.ಪಿ. ಯೋಜನೆಯಲ್ಲಿ ಕಟ್ಟಡಗಳನ್ನು ಹಂತ ಹಂತವಾಗಿ ಕಟ್ಟಲಾಗುತ್ತಿದೆ.